ಪ್ರವಾಸ

# ಅವಳಿಗುಡಿಗಳ ಶಿಲ್ಪವೈಭವ

ಚಿತ್ರ ಲೇಖನ:
**ಟಿ.ಎಸ್. ಗೋಪಾಲ್**



ಹೊಯ್ಸಳ ಲಾಂಛನ

**ಹಾ**ಸನ ಜಿಲ್ಲೆಯ ಮೊಸಳೆ ಗ್ರಾಮದ ಚೆನ್ನಕೇಶವ ಹಾಗೂ ನಾಗೇಶ್ವರ ಎಂಬ ಅವಳಿ ಗುಡಿಗಳು ಹೊಯ್ಸಳರ ಕಾಲದವು. ಹಾಸನದಿಂದ ಹೊಳೇನರಸೀಪುರದ ದಾರಿಯಲ್ಲಿ ಸುಮಾರು 16 ಕಿ.ಮೀ.ದೂರ ಕ್ರಮಿಸಿದರೆ ಸಾಕು. ಎಡದಲ್ಲಿ ಮೊಸಳೆ ಗ್ರಾಮದ ಹೆಸರು ಹೊತ್ತ ದೊಡ್ಡಫಲಕವೇ ಕಾಣುತ್ತದೆ.

ನಮ್ಮಲ್ಲಿ ಐತಿಹಾಸಿಕ ಮಹತ್ವವಿರುವ ಸ್ಥಳಗಳನ್ನು ನೋಡಹೋದವರಿಗೆ ಅಲ್ಲಿಗೆ ತಲುಪಿಸುವ ರಸ್ತೆ ಅಷ್ಟೇ ಪುರಾತನ ಸ್ಥಿತಿಯಲ್ಲಿರುವುದು ಕಂಡೇ ಕಾಣುತ್ತದೆ. ಹೊಳೇನರಸೀಪುರದ ಹಾದಿಯಿಂದಲೂ ನಾಲ್ಕು ಕಿ.ಮೀ. ಮುಂದೆ ಸಾಗಿದರೆ ಮೊಸಳೆ ಹೊಸಹಳ್ಳಿ ಸಿಗುತ್ತದೆ. ಅಲ್ಲಿಯೇ ರೈಲುನಿಲ್ದಾಣದ ಸಮೀಪ ಬಲಗಡೆಗೆ ಕಾಣುವ ರಸ್ತೆಯಲ್ಲಿ ಮುಂದುವರಿದು ಒಂದು ಕಿ.ಮೀ. ಮುಂದಕ್ಕೆ ಬಲಕ್ಕೆ ಹೊರಳುವ ದಾರಿಯಲ್ಲಿ ಅನತಿದೂರದಲ್ಲೇ ಮೊಸಳೆಗ್ರಾಮ ಕಾಣುವುದು. ಇಲ್ಲಿನ ತುಸು ಎತ್ತರದ ಸಮತಟ್ಟಾದ ದಿಬ್ಬದ ಮೇಲಿವೆ ಜೋಡಿ ದೇವಾಲಯಗಳು.

ಬೇಲೂರು, ಹಳೇಬೀಡು, ಸೋಮನಾಥಪುರಗಳನ್ನು ಕಂಡವರಿಗೆ ಈ ದೇಗುಲ ಕಟ್ಟಡಗಳು ಎತ್ತರ ಅಗಲಗಳಲ್ಲಿ ಚಿಕ್ಕದಾಗಿ ಕಾಣುತ್ತವೆ. ಆದರೆ, ಇಲ್ಲಿನ ಶಿಲ್ಪವೈಭವ, ವೈವಿಧ್ಯಗಳಿಗೇನೂ ಕೊರತೆಯಿಲ್ಲ. ಎರಡೂ ದೇವಾಲಯಗಳಲ್ಲಿ ಪೂಜೆ ಜರುಗುವುದರ ಜೊತೆಗೆ ನೋಡಬಂದವರಿಗೆ ಶಿಲ್ಪಗಳ ಪರಿಚಯ ಮಾಡಿಕೊಡಬಲ್ಲ ಸ್ಥಳೀಯರೂ ಇದ್ದಾರೆ.

ಒಂದಾನೊಂದು ಕಾಲಕ್ಕೆ ತೀಕ್ಷ್ಣವಾಗಿದ್ದ ಶೈವ ವೈಷ್ಣವ ಪಂಥಗಳ ಜಿದ್ದಾಜಿದ್ದಿಯನ್ನು ಶಮನಗೊಳಿಸುವ ಪ್ರಯತ್ನವಾಗಿ ಹೊಯ್ಸಳ ಅರಸರು ಒಂದೇ ಆವರಣದಲ್ಲಿ ನಿರ್ಮಿಸಿರುವ ಈ ಅವಳಿಗುಡಿಗಳು ಧಾರ್ಮಿಕ, ಸಾಂಸ್ಕೃತಿಕ ಸಾಮರಸ್ಯವನ್ನು ಸುಸ್ಥಿತಿಯಲ್ಲಿ ಉಳಿಸಬೇಕೆನ್ನುವ ಆ ಪ್ರಭುಗಳ ಕಾಳಜಿಯನ್ನೂ ಸಂಕೇತಿಸುತ್ತವೆ.

ಎರಡೂ ಗುಡಿಗಳು ಒಂದೇ ಆಕಾರದಲ್ಲಿರುವಂತೆ ಕಾಣುತ್ತವೆ. ಹೊರ ಜಗುಲಿ, ನಕ್ಷತ್ರಮಾದರಿಯ ಕಟ್ಟಡ, ಒಳಭಾಗದ ಮೇಲ್ಛಾವಣಿಯ ನವರಂಗ, ಮೇಲಿನ ಗೋಪುರಗಳು ಒಂದೇ ರೀತಿಯ ನಿರ್ಮಿತಿಗಳು. ಚಿಕ್ಕಮಗಳೂರು ಜಿಲ್ಲೆಯ ಮರಳೆ ಎಂಬ ಸ್ಥಳದಲ್ಲಿರುವ ಜೋಡಿ ದೇಗುಲಗಳನ್ನು ಹೊರತುಪಡಿಸಿದರೆ ಮೊಸಳೆ ಗ್ರಾಮದಲ್ಲಿ ಮಾತ್ರವೇ ನೀವು ಅವಳಿಗುಡಿ ಕಾಣುತ್ತೀರಿ.

ಚೆನ್ನಕೇಶವ ಗುಡಿಯಲ್ಲಿ ವಿಷ್ಣುವಿನ ವಿವಿಧರೂಪಗಳನ್ನು ಪರಿಚಯಿಸುವ ಶಿಲ್ಪಗಳಿದ್ದರೆ ನಾಗೇಶ್ವರನ ಗುಡಿಯಲ್ಲಿ ಶಿವ ಮತ್ತವನ ಪರಿವಾರ ಪರಿಚಯಿಸುವ ಶಿಲ್ಪಗಳನ್ನು ಕಾಣಬಹುದು. ಗುಡಿಗಳ ಮಧ್ಯಮಂಟಪದಲ್ಲಿ ನವರಂಗಗಳಿದ್ದು ಎಲ್ಲವೂ ಒಂದಕ್ಕಿಂತ ಒಂದು ಭಿನ್ನ ವಿನ್ಯಾಸವುಳ್ಳವು. ವಿಷ್ಣುದೇಗುಲದ ನಡುವಣ ಭುವನೇಶ್ವರಿಯು ಇಂದ್ರಾದಿ ದೇವಾನುದೇವತೆಗಳ ಪರಿವಾರವನ್ನು ಚಿತ್ರಿಸಿದರೆ, ಶಿವದೇಗುಲದಲ್ಲಿ ಕೈಲಾಸದ ಗಣಗಳ ಪರಿಚಯವಾಗುತ್ತದೆ. ಇದೇ ನಡುಮಂಟಪದಲ್ಲಿ ಹಲವು ದೇವಕೋಷ್ಠಗಳು (ಅಂದರೆ, ವಿಗ್ರಹಗಳನ್ನು ಇರಿಸಿರುವ ಗೂಡುಗಳು) ಇದ್ದು ವಿವಿಧ ದೇವತೆಗಳ ಸುಂದರ ವಿಗ್ರಹಗಳಿವೆ.

ಎರಡೂ ಗುಡಿಗಳಲ್ಲಿ ಸರಸ್ವತಿ, ಗಣಪತಿಯ ಸುಂದರ ವಿಗ್ರಹಗಳಲ್ಲದೆ, ವೈಷ್ಣವಿ, ಮಹಾಲಕ್ಷ್ಮಿ, ಯೋಗಾನರಸಿಂಹಮೂರ್ತಿಗಳೂ ಶಿವದೇಗುಲದ ಮಹಿಷಾಸುರಮರ್ದಿನಿ, ಕೇಶವ, ಸಪ್ತಮಾತೃಕೆಗಳ ಶಿಲ್ಪಗಳು ಹೊರಗಿನ ಹವೆಗೆ

ಸರಸ್ವತಿ



ಕಟ್ಟಡದ ಮೇಲಂಚಿನಲ್ಲಿ ಪುರಾಣಪಾತ್ರ, ಮಿಥುನಶಿಲ್ಪಗಳು



ಯೋಗಾನರಸಿಂಹ

